ಇಲ್ಲಿನ ಬಹಳಷ್ಟು ಜನ ಸ್ಟ್ರಾಪ್ ಆದ ನಂತರ ಊರುಗಳಿಗೆ ಹೋಗಿಬಿಡುತ್ತಾರೆ. ಆದರೆ ಅವರೆಲ್ಲ ಸಾಯುವವರೆಗೂ ಕಾಮಾಟಿಪುರವನ್ನು ಮರೆಯುವುದಿಲ್ಲ...'

'ಅಯ್ಯ ಶೇಟು, ನಿನ್ನ ಗೆಳೆಯ ಹೇಳಿದ ಮಾತುಗಳು ಸುಳ್ಳಲ್ಲ. ನನ್ನ ಮಕ್ಕಳಿಬ್ಬರ ವಿದ್ಯಾಭ್ಯಾಸಕ್ಕೂ ಇಲ್ಲಿನ ಕೆಲವು ಎನ್‌ಜಿಒಗಳು ಸಹಾಯ ಮಾಡಿದವು. ಇಬ್ಬರೂ ಡಿಪ್ಲೊಮ ಮಾಡಿ ಒಬ್ಬ ಟ್ರಾನ್ಸ್‌ಪೋರ್ಟ್ ಕಂಪನಿಯಲ್ಲಿ ಇದ್ದರೆ, ಇನ್ನೊಬ್ಬ ಮುಂಬಯಿ ಮಹಾನಗರ ಪಾಲಿಕೆಯಲ್ಲಿದ್ದಾನೆ. ಇಬ್ಬರೂ ಚೋಟಾ ಸೋನಾಪುರದಲ್ಲಿ ಚಿಕ್ಕ ಮನೆ ಮಾಡಿಕೊಂಡಿದ್ದಾರೆ. ಕಾಮಾಟಿಪುರದ ಅಡ್ರಸ್ಸಿನಲ್ಲಿರುವವರಿಗೆ ಹೆಣ್ಣು, ಗಂಡು ಕೊಡಲು ಯಾರೂ ಇಷ್ಟಪಡುವುದಿಲ್ಲ. ಅವರಿಬ್ಬರಿಗೂ ಮದುವೆಯಾದರೆ ನಾನು ಊರಿಗೆ ವಾಪಸ್ಸು ಹೋಗಿಬಿಡ್ತೀನಿ...'

'ಆಂ, ನನ್ನ ಮಗನ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಯಾವುದೋ ಒಂದು ಎನ್‌ಜಿಒ ವಹಿಸಿಕೊಂಡಿತ್ತು. ಅವನು ಎಂಬಿಎ ಪಾಸು ಮಾಡಿ ಹೋಟೆಲ್‌ನಲ್ಲಿ ಕೆಲಸಕ್ಕಿದ್ದ. ನನ್ನ ಮಗ ತುಂಬಾನೇ ಸುಂದರವಾಗಿದ್ದ. ಮುಂಬಯಿಯನ್ನು ನೋಡಲೆಂದು ಬಂದ ವಿದೇಶಿ ಯುವತಿಯೊಬ್ಬಳು ಅವನ ರೂಪಕ್ಕೆ ಮರುಳಾಗಿ ಅವನನ್ನು ಮದುವೆ ಮಾಡಿಕೊಂಡು ಅವನನ್ನೂ ಲಂಡನ್ನಿಗೆ ಕರೆದುಕೊಂಡು ಹೋಗಿದ್ದಾಳೆ. ಅವನು ಪ್ರಯಾಣಿಸಿದ ವಿಮಾನ ನನ್ನ ತಲೆಯ ಮೇಲೆಯೇ ಹಾರಿಹೋಯಿತು. ಈಗವನು ಲಂಡನ್ನಿನಲ್ಲಿ ದೊಡ್ಡ ಹೋಟೆಲ್ ಯಜಮಾನ. ನಾನು ಇನ್ನೆರಡು ತಿಂಗಳಿಗೆ ಅವನೊಂದಿಗೆ ಇರಲು ಅಲ್ಲಿಗೇ ಹೋಗುತ್ತಿದ್ದೇನೆ. ವೀಸಾ, ಪಾಸ್‌ಪೋರ್ಟ್, ಟಿಕೆಟ್ ಎಲ್ಲಾ ರೆಡಿ ಮಾಡಿಸಿದ್ದಾನೆ. ಅಲ್ಲಿ ಆರು ತಿಂಗಳಿದ್ದು ಮುಂಬಯಿಗೆ ವಾಪಸ್ಸು ಬರುತ್ತೇನೆ. ಮುಲುಂದದಲ್ಲಿ ನಾನಿರಲು ಒಂದು ಫ್ಲಾಟ್ ಕೂಡಾ ಖರೀದಿಸಿದ್ದಾನೆ. ಇದೆಲ್ಲಕ್ಕೂ ಕಾರಣವಾದ ಈ ಕಾಮಾಟಿಪುರವನ್ನು ಎಂದಿಗಾದರೂ ಮರೆಯಲಾದೀತೆ...?'

'ನನ್ನ ಮಗ ಕೂಡ ಚೆನ್ನಾಗಿ ಓದಿ ಈಗ ಹೋಟೆಲ್ ತಾಜ್‌ನಲ್ಲಿ ಕೆಲಸಕ್ಕಿದ್ದಾನೆ. ಸಪ್ಲಯರ್ ಕೆಲಸ. ಸಂಬಳ, ಟಿಪ್ಸ್ ಸೇರಿ ತಿಂಗಳಿಗೆ ನಲವತ್ತು ಸಾವಿರ ದುಡಿಯುತ್ತಾನೆ. ನನ್ನನ್ನು ಈ ದಂಧೆ ಬಿಟ್ಟು ಬಿಡು ಎಂದು ಹೇಳುತ್ತಿದ್ದಾನೆ. ಹದಿನಾರು ವರ್ಷ ವಯಸ್ಸಿಗೆ ಇಲ್ಲಿಗೆ ಕಾಲಿಟ್ಟವಳು ನಾನು. ನನಗಿನ್ನೂ ನಲವತ್ತೈದು ಆಗಿಲ್ಲ. ಈಗಲೂ ದಿನಕ್ಕೆ ಏನಿಲ್ಲವೆಂದರೂ ಏಳುನೂರು ಎಂಟುನೂರು ದುಡಿಯುತ್ತೇನೆ. ಮಗನಿಗೆ ಮದುವೆಯಾದರೆ ಸೊಸೆ ನನ್ನನ್ನು ಜೊತೆಯಲ್ಲಿಟ್ಟುಕೊಳ್ಳುತ್ತಾಳೆ ಎನ್ನುವುದಕ್ಕೆ ಖಾತರಿಯೇನು? ಒಂದಿಷ್ಟು ಕೂಡಿಟ್ಟುಕೊಂಡರೆ ವೃದ್ಧಾಶ್ರಮಗಳಲ್ಲಿ ನೆಮ್ಮದಿಯಾಗಿ ಇರಬಹುದು...'

'ಅಯ್ಯಾ ಬಾಬು, ಅವರು ಹೇಳುತ್ತಿರುವುದೆಲ್ಲ ಖಂಡಿತಾ ಸುಳ್ಳಲ್ಲ. ಆದರೆ ನಾನು ಹೇಳುವುದೂ ಸುಳ್ಳೇನಲ್ಲ. ನನ್ನಂಥ ದರಿದ್ರದವರೂ ಈ ಕಾಮಾಟಿಪುರದಲ್ಲಿ ಮಸ್ತಾಗಿ ತಾಂಡವವಾಡುತ್ತಿದ್ದಾರೆ. ನನಗೆ ಯಾರೂ ಇಲ್ಲ. ಇಲ್ಲಿಗೆ ಬಂದು ದಂಧೆಗಿಳಿದ ಬಹುತೇಕ ಮಹಿಳೆಯರನ್ನು ತಂದೆ–ತಾಯಿ, ಬಂಧು–ಬಳಗ, ಗಂಡ–ಮಕ್ಕಳು ಎಲ್ಲರೂ ದೂರ ಮಾಡುತ್ತಾರೆ. ನಮ್ಮನ್ನು ಸದಾ ಅನಾಥಪ್ರಜ್ಞೆ ಕಾಡುತ್ತದೆ. ಐವತ್ತು, ಐವತ್ತೈದು ವರ್ಷಗಳಿಗೆ ನಾನಾ ಕಾಯಿಲೆಗಳಿಗೆ ತುತ್ತಾಗಿ ಸಾಯುವವರೇ ಜಾಸ್ತಿ. ಇಲ್ಲಿ ಸತ್ತವರ ಹೆಣವನ್ನು ಮಹಾನಗರ ಪಾಲಿಕೆಯವರು ದಫನ್ ಮಾಡಿ ಪುಣ್ಯ ಕಟ್ಟಿಕೊಳ್ಳುತ್ತಾರೆ. ದಫನ್ ಕಾರ್ಯದಲ್ಲಿ ಸುತ್ತಮುತ್ತಲಿನ ಪರಿಚಯದವರು ಪಾಲ್ಗೊಳ್ಳುತ್ತಾರೆ. ಆದರೆ ಅಂಥ ಸಮಯದಲ್ಲಿ ಗಿರಾಕಿಗಳು ಸಿಕ್ಕರೆ ಇದ್ದಲ್ಲಿಂದಲೇ ಸತ್ತವರಿಗೆ ಸ್ವರ್ಗ ಪ್ರಾಪ್ತಿಯಾಗಲೆಂದು ದೇವರಲ್ಲಿ ಪ್ರಾರ್ಥಿಸುತ್ತಾರೆ. ನನ್ನನ್ನೇ ತೆಗೆದುಕೊಳ್ಳಿ; ನನ್ನ ತುಂಬಾ ಹತ್ತಿರದ ಗೆಳತಿಯರಿಬ್ಬರು ಸತ್ತಾಗ, ಗಿರಾಕಿಗಳು ಇದ್ದಿದ್ದರಿಂದ ಶವ ನೋಡಲಿಕ್ಕೆ ಹೋಗಲು ಕೂಡ ನನಗೆ ಸಾಧ್ಯವಾಗಿರಲಿಲ್ಲ. ದೇವರನ್ನು, ಅವರಿವರನ್ನು ಬೈದುಕೊಂಡರೆ ಪ್ರಯೋಜನವೇನು? ಹಿಂದಿನ ಜನ್ಮಗಳಲ್ಲಿ ಏನೇನು ಪಾಪ ಕರ್ಮಗಳನ್ನು ಮಾಡಿದ್ದೆವೋ ಕಂಡವರಾರು...?'

ಅಸ್ಗರ್ ವೈಲ್ಡನಿಗೆ ಕಾಮಾಟಿಪುರಕ್ಕೆ ಬರಬಾರದಿತ್ತೆನಿಸಿತ್ತು. ಅವರನ್ನೆಲ್ಲಾ ನೋಡಬಾರದೆನಿಸಿತ್ತು. ಆ ಮಾತುಗಳನ್ನೆಲ್ಲಾ ಕೇಳಬಾರದೆನಿಸಿತ್ತು. ಇಲ್ಲಿಗೆ ತಾನು ಬರಲು ಕಾರಣರಾದ ಡಾಕ್ಟರ್ ಮನೋರಂಜನಿಯವರನ್ನು ಕಾಣಲೂ ಹೋಗಬಾರದಿತ್ತೆನಿಸಿತ್ತು. ಇಷ್ಟೆಲ್ಲಕ್ಕೂ ಮೂಲವಾದ ಆ ಕನಸೇ ತನಗೆ ಬೀಳಬಾರದಾಗಿತ್ತೆನಿಸಿತ್ತು. ಆದರೆ ಕನಸು ಬೀಳುವುದು ಸುಪ್ತಾವಸ್ಥೆಯಲ್ಲಿ ಬಿದ್ದುಕೊಂಡಿರುವ ಮೆದುಳಿನಿಂದಾಗಿಯಲ್ಲವೆ? ಅದನ್ನು ನಿಯಂತ್ರಿಸಲು ಯಾರಿಂದಲೂ ಸಾಧ್ಯವಿಲ್ಲವಲ್ಲ! ಹಿಂತಿರುಗಿ ಹೋಗೋಣವೆಂದ ಅಲೆಗ್ಸಾಂಡರ್‌ನನ್ನು ಕುರಿತು. ಅದಕ್ಕೆ ಅಲೆಗ್ಸಾಂಡರ್ ನಗುತ್ತಾ 'ನೀನು ಕಾಮಾಟಿಪುರದ ಶೇಕಡ ಹತ್ತರಷ್ಟನ್ನೂ ನೋಡಲಿಲ್ಲ. ಆಗಲೇ ಬೇಸರವಾಯಿತೆ? ನಾನು ಲೆಕ್ಕವಿಲ್ಲದಷ್ಟು ಸಾರಿ ಇಲ್ಲಿ ತಿರುಗಾಡಿದ್ದೇನೆ, ಗೆಳೆಯರ ಜೊತೆಗೆ ಮತ್ತು ಒಂಟಿಯಾಗಿ ಕೂಡ. ಒಂಬತ್ತನೆಯ ತರಗತಿಯಲ್ಲಿ ಒಮ್ಮೆ ನೀನು ಇನ್ನಿಬ್ಬರು ಸ್ನೇಹಿತರೊಂದಿಗೆ ಕಾರಿನಲ್ಲಿ ಡ್ರಗ್ಸ್ ತೆಗೆದುಕೊಳ್ಳುವಾಗ ಪೊಲೀಸರಿಗೆ ಸಿಕ್ಕಿಬಿದ್ದು, ನಿನ್ನ ತಾತ ಬಂದು ಮಸ್ತಾಗಿ ದುಡ್ಡು ಕೊಟ್ಟು ಬಿಡಿಸಿಕೊಂಡು ಹೋಗಿದ್ದು ನನಗೆ ಅಂದೇ ತಿಳಿದಿತ್ತು. ನಾನು ಕೂಡ ಅಂದು ಸಿಕ್ಕಿಬಿದ್ದಿದ್ದೆ. ನೀವು ಹೋದ ಜಸ್ಟ್ ಟೆನ್ ಮಿನಿಟ್ಸ್‌ನಲ್ಲಿ ನನ್ನನ್ನು ಹಿಡಿದುಕೊಂಡು ಬಂದಿದ್ದರು. ನಮ್ಮಪ್ಪ ಬಂದು ಪೊಲೀಸರಿಗೆ ಒಂದೇ ಒಂದು ನಯಾಪೈಸೆ ಕೊಡದೆ ಬಿಡಿಸಿಕೊಂಡು ಹೋಗಿದ್ದ. ನಿಂಗೆ ಗೊತ್ತಾ, ಇವತ್ತು ನಾನೇ ಇಂಡಿಪೆಂಡೆಂಟ್ ಆಗಿ ಡಿಸಿಪಿವರೆಗೂ ಹ್ಯಾಂಡ್ಲ್ ಮಾಡ್ತೀನಿ. ಏನಿಲ್ಲ, ಬರೀ ದುಡ್ಡು ಅಷ್ಟೆ. ಈ ಏರಿಯಾದ ಕಾಂಡೋಮ್ ಬಿಸಿನೆಸನ್ನ ನೋಡಿಕೊಳ್ಳೋದು ನಾನೆ. ಸಬ್ಸಿಡಿ ರೇಟಲ್ಲಿ ಗೌರ್ನಮೆಂಟ್ ಸಪ್ಲೈ ಅಂಡ್ ಡಿಸ್ಟ್ರಿಬ್ಯೂಶನ್ ನಮ್ಮ ಕಂಪನಿಗೆ ಸಿಕ್ಕಿರೋದು. ನಮ್ಮನ್ನು ಬಿಟ್ಟು ಯಾರೂ ಟೆಂಡರ್ ಹಾಕೋಕೆ ಮುಂದೆ ಬರಲ್ಲ...' ಅವನು ಹೇಳುತ್ತಲೇ ಇದ್ದ.

'ಅಲೆಗ್ಸಾಂಡರ್ ಯಾವ ವಿಷಯವೂ ಈಗ ನನ್ನ ತಲೆಗೆ ಹೋಗುತ್ತಿಲ್ಲ. ನಾನು ಈಗ ಮನೆಗೆ ಹೋಗಬೇಕಷ್ಟೆ' ಎಂದಿದ್ದ. ಅಲೆಗ್ಸಾಂಡರ್ ಬದಲೇಳದೆ ತನ್ನ ಡ್ರೈವರನಿಗೆ ಹೇಳಿ ಆಡಿ ಕಾರಲ್ಲಿ ಅಸ್ಗರ್ ವೈಲ್ಡನನ್ನು ಮನೆಗೆ ಕಳಿಸಿದ್ದ. ಮನೆಯಲ್ಲಿ ತಾನು ಕಾಮಾಟಿಪುರಕ್ಕೆ ಹೋಗಿದ್ದ ವಿಷಯ ಯಾರ ಬಳಿಯೂ ಹೇಳಿರಲಿಲ್ಲ. ಪ್ರತಿದಿನ ಅವನು ಹೆಚ್ಚಿಗೆ ಸಲುಗೆಯಿಂದ ಮಾತನಾಡುವುದು ತಾತ ಗುನ್ನಾಲಾಲನೊಂದಿಗೆ. ಅಜ್ಜಿ ಮತ್ತು ತಾಯಿಯೊಂದಿಗೆ ತಿಂಡಿ, ಊಟದ ಸಮಯದಲ್ಲಿ. ಇನ್ನು ತಂದೆ ಭವರ್ ಲಾಲನೊಂದಿಗೆ ಮಾತನಾಡುವುದು ಅಪರೂಪವೇ. ಭವರ್ ಲಾಲ್ ಸಂಪೂರ್ಣವಾಗಿ ವ್ಯಾಪಾರ, ವಹಿವಾಟುಗಳ ಮೇಲ್ವಿಚಾರಣೆಯಲ್ಲಿ ತೊಡಗಿರುವುದರಿಂದಲೂ, ತನ್ನ ಅಪ್ಪನೇ ಮಗನ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡಿರುವುದರಿಂದಲೂ ಅವನಿಗೆ ಮಗನ ಬಗ್ಗೆ ಚಿಂತೆಯಿರಲಿಲ್ಲ. ಮನೆಯಲ್ಲಿ ಮಗನನ್ನು ಕಂಡಾಗಲೆಲ್ಲ ಮುಗುಳ್ನಗುತ್ತಿದ್ದ. ಅಂದು ರಾತ್ರಿ ಊಟ ಮಾಡಿ ಮಲಗಿದ ಅಸ್ಗರ್ ವೈಲ್ಡನಿಗೆ ಬೇಗನೆ ನಿದ್ದೆ ಹತ್ತಿರಲಿಲ್ಲ. ಇದ್ದಕ್ಕಿದ್ದಂತೆ ಅವನಿಗೆ ಏಕೋ ಡಾಕ್ಟರ್ ಮನೋರಂಜನಿಯ ಬಳಿ ಮಾತನಾಡಬೇಕೆನಿಸಿತು. ಒಂಥರಾ ಹಿಂಜರಿಕೆಯಿಂದಲೇ ಫೋನ್ ಮಾಡಿದ್ದ.

'ನೀನು ಕಾಮಾಟಿಪುರಕ್ಕೆ ಭೇಟಿ ನೀಡಿ ಬಂದೆ ಅಲ್ವಾ? ನಿನ್ನ ಫ್ರೆಂಡ್ ಅಲೆಗ್ಸಾಂಡರ್ ಸಿಕ್ಕಿದ್ನ?' ಎಂಬ ಮನೋರಂಜನಿಯವರ ಮಾತು ಕೇಳಿ ಬೆಚ್ಚಿಬಿದ್ದವನ ಬಾಯಿಂದ ಮಾತುಗಳೇ ಹೊರಡಲಿಲ್ಲ. ಮತ್ತೆ ಆ ಕಡೆಯಿಂದ ಮನೋರಂಜನಿಯವರೇ ಮಾತನಾಡಿದ್ದರು.

'ನನಗೆ ಗೊತ್ತು – ಸೈಕಾಲಜಿ ಓದಿ ತಿಳಿದಿದ್ದೇನೆ; ಮನುಷ್ಯನಿಗೆ ಕುತೂಹಲ ಎಷ್ಟು ಒಳ್ಳೆಯದೋ ಅಷ್ಟೇ ಕೆಟ್ಟದ್ದೆಂದು. ಕುತೂಹಲ ಆತಂಕದ ರೂಪ ಪಡೆಯಬಾರದಷ್ಟೆ. ಆತಂಕವು ಮನಸ್ಥಿತಿಯ ಮಟ್ಟವೊಂದನ್ನು ಸೂಚಿಸುತ್ತದೆ. ಮನದ ಸಮತೋಲನವನ್ನು ಕಲಕುವ ಆತಂಕ ಒಮ್ಮೊಮ್ಮೆ ದೈಹಿಕ ಕಂಪನಕ್ಕೂ ಎಡೆಮಾಡಿಕೊಡುತ್ತದೆ. ಎಂಥ ಮಾನಸಿಕ ಸ್ಥೈರ್ಯವಿದ್ದರೂ ಪ್ರತಿಯೊಬ್ಬ ಮನುಷ್ಯನೂ ಆತಂಕಕ್ಕೆ ಒಳಗಾಗಿಯೇ ತೀರುತ್ತಾನೆ. ಮನಸ್ಸನ್ನು ನಿಯಂತ್ರಿಸಿಕೊಳ್ಳುವ ಶಕ್ತಿ ಮನಸ್ಸಿನಿಂದಲೇ ಹುಟ್ಟಬೇಕಲ್ಲ? ಆದ್ದರಿಂದಲೇ ಇಂಥ ನಿಯಂತ್ರಣದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಸೋಲನ್ನು ಅನುಭವಿಸುವುದು. ಸೋಲು ಮತ್ತು ಗೆಲುವಿನ ಮಧ್ಯೆ ಒಂದು ಸಣ್ಣ ಗೆರೆಯಷ್ಟೇ ವ್ಯತ್ಯಾಸ. ಇರುವುದು–ಇಲ್ಲದಿರುವುದು, ಬಡತನ–ಸಿರಿತನ, ಸತ್ಯ–ಮಿಥ್ಯ ಇವುಗಳ ಮಧ್ಯೆ ಅಂತರ ಅಷ್ಟೇನೂ ಇಲ್ಲ. ಇದು ಏಕೆಂದರೆ, ಸಕಲ ಜೀವಜಗತ್ತು ಇಲ್ಲಿ ಶಾಶ್ವತವೇನೂ ಅಲ್ಲದಿರುವುದೇ ಆಗಿದೆ. ಭೂಮಿಯ ಆಯುಸ್ಸಿನೊಂದಿಗೆ ಯಾವುದೇ ಜೀವಿಯ ಆಯುಸ್ಸನ್ನು ಮೌಲ್ಯಮಾಪನಕ್ಕೆ ತೆಗೆದುಕೊಂಡರೂ ಅದು ಲೆಕ್ಕಕ್ಕೂ ಸಿಗುವುದಿಲ್ಲ.

(ಸಶೇಷ)